**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 56/22**

| | | |
|---|---|---|
| ಹೆಸರು | ಃ ಮಲ್ಲಿಕ್ ರಾಜ್ | ಸಿ.ಡಬ್ಲ್ಯೂ 3 |
| ತಂದೆಯ ಹೆಸರು | ಃ ಸಿದ್ದರಾಜು | ಪಿ.ಡಬ್ಲ್ಯೂ 3 |
| ವಯಸ್ಸು | ಃ 23 ವರ್ಷ | |
| ಉದ್ಯೋಗ | ಃ ಏನೂ ಕೆಲಸ ಇಲ್ಲ | |
| ವಾಸ ಸ್ಥಳ | ಃ ಮಳವಳ್ಳಿ | |

ಸಾಕ್ಷಿಗೆ ದಿನಾಂಕಃ **22.01.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .**

ಚಾ.ಸಾ. 1, 2 , 4 ರಿಂದ 8 ರವರ ಪರಿಚಯವಿದೆ. 15.03.2022 ರಂದು ನಾನು ಮತ್ತು ಚಾಸಾ-2 ರವರು ರಾತ್ರಿ 7.45 ರ ಸಮಯದಲ್ಲಿ ಮಳವಳ್ಳಿ ಮೈಸೂರು ರಸ್ತೆಯ ರಾಘವೇಂದ್ರ ಚಿಪ್ಸ ಅಂಗಡಿ ಮುಂಭಾಗ ನಿಂತಿರುವಾಗ ನಮ್ಮ ಏರಿಯಾದವರು ಕೆಎ-11-ಹೆಚ್ -8485 ನಂಬರಿನ ಬೈಕಿನಲ್ಲಿ ಮೈಸೂರು ರಸ್ತೆ ಕಡೆಯಿಂದ ಬಸ್ ನಿಲ್ದಾಣದ ಕಡೆ ಬರುತ್ತಿರುವಾಗ ಮೈಸೂರು ಕಡೆಯಿಂದ ಲಾರಿಯನ್ನು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಲಗಡೆಗೆ ವಾಹನವನ್ನು ತೆಗೆದುಕೊಂಡ ಕಾರಣ ಬೈಕಿನ ಹ್ಯಾಂಡಲ್ ಗೆ ವಾಹನ ತಗುಲಿರುತ್ತದೆ. ಅಗ ಬೈಕಿನಲ್ಲಿ ಇದ್ದ

ವ್ಯಕ್ತಿಯು ಕೆಳಗಡೆ ಬಿದ್ದು ಪೆಟ್ಟಾಗಿರುತದೆ. ಆಗ ನಾನು ಮತ್ತು ಚಾಸಾ-2 ಹೋಗಿ ನೋಡಲಾಗಿ ಸದರಿಯವರಿಗೆ ಮುಖ ಮತ್ತು ಬಲಭುಜ ಹಾಗೂ ಬಲಕೆನ್ನೆ, ತುಟಿ ಮತ್ತು ಬಲಭಾಗಕ್ಕೆ ಪೆಟ್ಟಾಗಿತ್ತು. ಅವರನ್ನು ಮಳವಳ್ಳಿ ಸರ್ಕಾರಿ ಅಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ. ನಾನು ಗಾಯಾಳುವಿನ ಮನೆಯವರಿಗೆ ವಿಷಯ ತಿಳಿಸಿ ಅವರನ್ನು ಅಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ. ವೈದ್ಯರು ಗಾಯಾಳು ಮೃತರಾಗಿರುವ ಬಗ್ಗೆ ದೃಡೀಕರಿಸಿರುತ್ತಾರೆ. ಅಪಘಾತದ ವಿಚಾರವನ್ನು ನಾನು ಪೋಲೀಸರಿಗೆ ತಿಳಿಸಿರುತ್ತೇನೆ. ಅಪಘಾತಪಡಿಸಿದ ಕ್ಯಾಂಟರ್ ನೊಂದಾಣಿ ಸಂಖ್ಯೆ ಕೆಎ-53- 4257 ಅಗಿರುತ್ತದೆ. ಅಪಘಾತಪಡಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. (ಅರೋಪಿಯು ಗೈರು ಹಾಜರಾಗಿದ್ದು ಅರೋಪಿಯಗುರುತಿಸುವಿಕೆಯಲ್ಲಿ ತಕರಾರು ಇಲ್ಲವೆಂದು ಅವರ ಪರ ವಕೀಲರು ತಿಳಿಸಿರುತ್ತಾರೆ.)

**<u>ಪಾಟೀ ಸವಾಲುಃ ಅರೋಪಿ ಪರ ವಕೀಲರಿಂದ ಃ</u>**

ಘಟನಾ ಸ್ಥಳದ ರಸ್ತೆ ಮೈಸೂರು - ಮಳವಳ್ಳಿ ಮುಖ್ಯ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಡಿವೈಡರ್ ಇರುತ್ತದೆ ಎಂದರೆ ಸರಿ. ಅದು ಏಕಮುಖ ಸಂಚಾರದ ರಸ್ತೆ ಎಂದರೆ ಸರಿ. ಘಟನಾ ಸ್ಥಳದ ಪಕ್ಕದಲ್ಲಿ ಹಲವಾರು ಅಂಗಡಿಗಳು ಇರುತ್ತವೆ ಎಂದರೆ ಸರಿ. ಕ್ಯಾಂಟರ್ ವಾಹನವು ನಿಧಾನವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ಬೈಕ ಸವಾರನಿಗೆ ಸುಮಾರು 66 ವರುಷಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸರಿ. ಬೈಕ್ ಸವಾರನು ಡಿವೈಡರ್ ಪಕ್ಕದಲ್ಲಿ ಬೈಕನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಬೈಕ ಸವಾರನ್ನು ಹಿಂದೆ ಬರುತ್ತಿದ್ದ ವಾಹನವನ್ನು ಗಮನಿಸದೆ ಎಡಭಾಗಕ್ಕೆ ಬರಲು ಹೋಗಿ ಅವರ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ಸ್ಥಳಕ್ಕೆ ಹೋಗಿರುತ್ತೇವೆ. ಚಿಪ್ಸ ಅಂಗಡಿ ಬಳಿ ನಿಂತಿರೆ ಅಪಘಾತದ ಸ್ಥಳ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಲಾರಿಯ ಎಡಭಾಗಕ್ಕೆ ಅಪಘಾತವಾಗಿರುತ್ತದೆ. ಮೃತ ವ್ಯಕ್ತಿ ಮತ್ತು ಚಾಸಾ-1 ರಿಂದ 8 ಒಂದೇ ಗ್ರಾಮದವರು ಎಂದರೆ ಸರಿ. ಮೃತರ ಕುಟುಂಬದವರಿಗೆ ಪರಿಹಾರ ದೊರಕಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ, ನಾನು ಪೋಲೀಸ್ ಠಾಣೆಯಲ್ಲಿ ಎಷ್ಟು ಸಹಿ ಮಾಡಿರುತ್ತಾರೆ ಎಂದು ನೆನಪಿರುವುಲ್ಲ. ಪೋಲೀಸರು ಏನೂ ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿರುತ್ತದೆ. ರಾತ್ರಿ 8.00 ಗಂಟೆ ಸಮಯದಲ್ಲಿ ಪೋಲೀಸರು ಬರವಣಿಗೆ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಮೃತ ವ್ಯಕ್ತಿಗೆ ಪೆಟ್ಟಾಗಿದ್ದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಏನನೂ ಹೇಳಿರುವುದಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.